

ವಿಠಲಗಟ್ಟಿ ಉಳಿಯ
ಕಲೆ: ರಘುಪತಿ ಶೃಂಗೇರಿ

# ಮುಳುಗುವ ಹಂತದಲ್ಲೊಬ್ಬ ಕಥೆಗಾರ

## ಕತೆ ಆರಂಭಿಸುವ ಮುನ್ನ

ಗಿರಿ ಒಂದು ಹಳ್ಳಿಯ ಕೃಷಿ ಕುಟುಂಬದಲ್ಲಿ ಜನಿಸಿದವನು. ಆದರೆ ಒಳ್ಳೆಯ ಕತೆಗಾರ. ಕೆಲವು ವರ್ಷಗಳವರೆಗೆ ಕೃಷಿಯಲ್ಲೂ ಪಳಗಿದಾತ. ನಡುವೆ ಘಾತ–ಪ್ರತ್ಯಾಘಾತಗಳಿಗೆ ತುತ್ತಾಗಿದ್ದ ಮತ್ತು ಒಂದು ಹೆಣ್ಣಿನ ಪ್ರೇಮಪಾಶದಲ್ಲಿ ಸಿಲುಕಿದನೆಂದು ಕೆಲವರಿಗೆ ಮಾತ್ರ ಅರ್ಥವಾಯಿತು. ಆ ಹೆಣ್ಣು ವಾಸ್ತವವಾಗಿಯೂ ಏನಾಗಿದ್ದಳು ಎಂಬುದು ಗಿರಿಯ ಸಂಗಡ ಇದ್ದವರಿಗೆ ಮಾತ್ರ ತಿಳಿದಿರಲಿಲ್ಲ.

ಗಿರಿಯ ಮನ ಪರಿವರ್ತನೆ ಹಾಗೂ ಪ್ರೇಮ ಸಂಬಂಧಗಳನ್ನು ಸ್ವತಃ ಆತನಿಗೇ ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆ ಕುರಿತು ನೆನಪಾದಾಗಲೆಲ್ಲಾ ಅವ್ಯಕ್ತ ಭಯದಿಂದ ತತ್ತರಿಸುತ್ತಿದ್ದ. ಭಯಾನಕ ಕನಸನ್ನು ಕಂಡವನಂತೆ ಬೆಚ್ಚಿಬೀಳುತ್ತಿದ್ದ. ಹೆಣ್ಣಿನ ಸಂಗಡ ಪ್ರಥಮ ನೋಟದಲ್ಲಿಯೇ ಪ್ರೇಮ ಹುಟ್ಟುತ್ತದೆಯೋ ಅದೂ